ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 09-04-1971.

***ಅವ್ಯಕ್ತ ಸ್ಥಿತಿಯಲ್ಲಿ ಸರ್ವ ಗುಣಗಳ ಅನುಭವ*** (अव्यक्त स्थिति में सर्व गुणों का अनुभव)

ಧ್ವನಿಯಿಂದ ಅತೀತವಾಗಿರುವ ಸ್ಥಿತಿ ಪ್ರಿಯವಾಗಿದೆಯೋ ಅಥವಾ ಧ್ವನಿಯಲ್ಲಿ ಇರುವ ಸ್ಥಿತಿ ಪ್ರಿಯವಾಗಿದೆಯೊ? ಯಾವ ಸ್ಥಿತಿ ಹೆಚ್ಚು ಪ್ರಿಯವಾಗಿದೆ? ಎರಡೂ ಸ್ಥಿತಿಗಳು ಒಟ್ಟಿಗೆ ಇರಲು ಸಾಧ್ಯವೇ? ಇದರ ಅನುಭವ ಇದೆಯೇ? ಈ ಅನುಭವ ಮಾಡುವ ಸಮಯದಲ್ಲಿ ಯಾವ ಗುಣ ಪ್ರತ್ಯಕ್ಷ ರೂಪದಲ್ಲಿ ಕಂಡು ಬರುತ್ತದೆ? ಅತೀತ ಮತ್ತು ಅತಿಪ್ರಿಯ (ನ್ಯಾರಾ ಮತ್ತು ಪ್ಯಾರಾ) ಈ ಅವಸ್ಥೆ ಹೇಗಿದೆ ಎಂದರೆ ಬೀಜದಲ್ಲಿ ವೃಕ್ಷ ಸಮಾವೇಶವಾಗಿರುವ ಹಾಗೆ ಈ ಅವ್ಯಕ್ತ ಸ್ಥಿತಿಯಲ್ಲಿ ಸಂಗಮ ಯುಗದ ಯಾವ ವಿಶೇಷ ಗುಣಗಳ ಮಹಿಮೆ ಮಾಡುತ್ತಾ ಆ ವಿಶೇಷ ಗುಣ ಆ ಸಮಯದಲ್ಲಿ ಅನುಭವ ಆಗುತ್ತದೆ. ಏಕೆಂದರೆ ಮಾಸ್ಟರ್ ಬೀಜರೂಪ ಸಹ ಆಗಿರುವಿರಿ, ಜ್ಞಾನಪೂರ್ಣರೂ ಆಗಿರುವಿರಿ. ಆದ್ದರಿಂದ ಶಾಂತಿ ಮಾತ್ರ ಅಲ್ಲ ಆದರೆ ಶಾಂತಿಯ ಜೊತೆ ಜೊತೆಗೆ ಅತೀಂದ್ರಿಯ ಸುಖ, ಜ್ಞಾನ, ಪ್ರೇಮ, ಆನಂದ, ಶಕ್ತಿ ಇತ್ಯಾದಿ ಸರ್ವ ಗುಣಗಳ ಅನುಭವ ಮಾಡುತ್ತಾರೆ. ಕೇವಲ ಸ್ವಯಮೇ ಅಲ್ಲ, ಆದರೆ ಇತರ ಆತ್ಮರು ಕೂಡ ಇಂತಹ ಸ್ಥಿತಿಯಲ್ಲಿ ಸ್ಥಿತವಾಗಿರುವ ಆತ್ಮನ ಮುಖದಿಂದ ಈ ಗುಣಗಳೆಲ್ಲವನ್ನು ಅನುಭವ ಮಾಡಿಕೊಳ್ಳುತ್ತಾರೆ. ಯಾವ ರೀತಿ ಸಾಕಾರ ರೂಪದಲ್ಲಿ ಏನು ಅನುಭವ ಮಾಡಿದಿರಿ? ಒಂದೇ ಸಮಯದಲ್ಲಿ ಸರ್ವ ಗುಣಗಳು ಅನುಭವಕ್ಕೆ ಬರುತ್ತವೆ. ಏಕೆಂದರೆ ಒಂದು ಗುಣದಲ್ಲಿ ಸರ್ವ ಗುಣಗಳು ಸಮಾವೇಶವಾಗಿವೆ. ಯಾವ ರೀತಿ ಅಜ್ಞಾನ ಕಾಲದಲ್ಲಿ ಒಂದು ವಿಕಾರದ ಜೊತೆ ಸರ್ವ ವಿಕಾರಗಳ ಸಂಬಂಧವಿರುತ್ತದೆಯೋ ಅದೇ ರೀತಿ ಒಂದು ಗುಣದ ಜೊತೆ ಮುಖ್ಯ ಗುಣಗಳ ಆಳವಾದ ಸಂಬಂಧವಿದೆ. ಯಾರಾದರೂ ನನ್ನ ಸ್ಥಿತಿ ಜ್ಞಾನ ಸ್ವರೂಪವಾಗಿದೆ ಎಂದು ಹೇಳಿದರೆ, ಜ್ಞಾನ ಸ್ವರೂಪದ ಜೊತೆ ಜೊತೆಗೆ ಅನ್ಯ ಗುಣಗಳೂ ಅದರಲ್ಲಿ ಅವಶ್ಯ ಸಮಾವೇಶವಾಗಿರುತ್ತವೆ. ಒಂದು ಶಬ್ದದಲ್ಲಿ ಆ ಸ್ಥಿತಿಗೆ ಏನು ಹೇಳುವಿರಿ? ಮಾಸ್ಟರ್ ಸರ್ವಶಕ್ತಿವಂತ. ಇಂತಹ ಸ್ಥಿತಿಯಲ್ಲಿ ಸರ್ವ ಶಕ್ತಿಗಳ ಧಾರಣೆ ಇರುತ್ತದೆ ಆದ್ದರಿಂದ ಇಂತಹ ಸ್ಥಿತಿಯನ್ನೇ ಸಮಾನತೆ ಮತ್ತು ಸಂಪೂರ್ಣತೆಯ ಸ್ಥಿತಿಯನ್ನು ತಯಾರು ಮಾಡಿಕೊಳ್ಳುವುದಾಗಿದೆ. ಇಂತಹ ಸ್ಥಿತಿಯಲ್ಲಿ ಸ್ಥಿತರಾಗಿ ಸೇವೆ ಮಾಡುತ್ತೀರಾ? ಸೇವೆ ಮಾಡುವ ಸಮಯದಲ್ಲಿ ಸ್ಟೇಜ್ ಮೇಲೆ ಬಂದಾಗ ಮೊದಲು ಈ ಸ್ಟೇಜ್ ಮೇಲೆ ಸ್ಥಿತರಾಗಿ ನಂತರ ಸ್ಥೂಲ ಸ್ಟೇಜ್ ಮೇಲೆ ಬರಬೇಕು. ಇದರಿಂದ ಏನು ಅನುಭವ ಆಗುತ್ತದೆ? ಸಂಘಟನೆಯ ಮಧ್ಯದಲ್ಲಿದ್ದರೂ ಅಲೌಕಿಕ ಆತ್ಮರೆಂದು ಕಂಡು ಬರುತ್ತೀರಿ. ಈಗ ಸಾಧಾರಣ ಸ್ವರೂಪದ ಜೊತೆ ಜೊತೆಗೆ ಸ್ಥಿತಿ ಸಹ ಸಾಧಾರಣವಾಗಿ ಕಂಡು ಬರುತ್ತದೆ. ಆದರೆ ಸಾಧಾರಣ ರೂಪದಲ್ಲಿದ್ದರೂ ಅಸಾಧಾರಣ ಸ್ಥಿತಿ ಮತ್ತು ಅಲೌಕಿಕ ಸ್ಥಿತಿ ಆಗುವುದರಿಂದ ಸಂಘಟನೆಯ ಮಧ್ಯದಲ್ಲಿಯೂ ಪರಮಾತ್ಮನ ಜನರು ಎಂದು ಕಂಡುಬರುವಿರಿ. ಪ್ರಾರಂಭದಲ್ಲಿ ಇಂತಹ ಸ್ಥಿತಿಯ ನಶೆ ಇರುತ್ತಿತ್ತಲ್ಲವೆ. ಯಾವ ರೀತಿ ನಕ್ಷತ್ರಗಳ ಸಂಘಟನೆಯಲ್ಲಿ ವಿಶೇಷ ನಕ್ಷತ್ರಗಳು ಇರುತ್ತವೆಯೋ, ಅದರ ಹೊಳಪು, ಸುಂದರತೆ ದೂರದಿಂದ ಭಿನ್ನ ಮತ್ತು ಪ್ರಿಯ ಎನಿಸುತ್ತದೆ. ಹೀಗೆ ನಕ್ಷತ್ರಗಳಾದ ನೀವು ಸಹ ಸಾಧಾರಣ ಆತ್ಮರ ಮಧ್ಯದಲ್ಲಿ ಒಂದು ವಿಶೇಷ ಆತ್ಮರಾಂತೆ ಕಣಿಸಬೇಕು. ಯಾವುದಾದರೂ ಅಸಾಧಾರಣ ವಸ್ತು ಮುಂದೆ ಬಂದಾಗ ಇಷ್ಟ ಇಲ್ಲದಿದ್ದರೂ ಎಲ್ಲರ ಗಮನ ಅದರ ಕಡೆ ಸೆಳೆಯಲ್ಪಡುತ್ತದೆ. ಹೀಗೆ ಇಂತಹ ಸ್ಥಿತಿಯಲ್ಲಿ ಸ್ಥಿತರಾಗಿ ಸ್ಟೇಜ್ ಮೇಲೆ ಬನ್ನಿರಿ ಆಗ ಜನರ ದೃಷ್ಟಿ ಸ್ವತಃ ನಿಮ್ಮ ಮೇಲೆ ಬೀಳಬೇಕು. ಸ್ಟೇಜ್ ಸೆಕ್ರೆಟರಿ ನಿಮ್ಮ ಪರಿಚಯ ಕೊಡಬಾರದು ಆದರೆ ನಿಮ್ಮ ಸ್ಟೇಜ್ ಸ್ವತಃ ಪರಿಚಯ ಕೊಡಬೇಕು. ವಜ್ರ ಧೂಳಿನಲ್ಲಿ ಮುಚ್ಚಿದ್ದರೂ ತನ್ನ ಪರಿಚಯ ಸ್ವಯಂ ಕೊಡುವುದಿಲ್ಲವೆ. ಹಾಗೆಯೇ ಸಂಗಮ ಯುಗದ ವಜ್ರ ಸಮಾನ ಜೀವನ ತನ್ನ ಪರಿಚಯ ಸ್ವಯಂ ಕೊಡಲು ಸಾಧ್ಯವಿದೆ. ಇಲ್ಲಿಯವರೆಗಿನ ಪರಿಣಾಮ ಏನಾಗಿದೆ. ಗೊತ್ತಿದೆಯೇ? ಈಗ ಯಾವುದರ ಸಮಾನ ಆಗಿದ್ದೀರಿ? ಭಾಷಣ ಇತ್ಯಾದಿ ಮಾಡುತ್ತೀರಿ ಅದರ ಪರಿಣಾಮ ಏನು ಕಂಡುಬರುತ್ತದೆ? ವರ್ತಮಾನ ಸಮಯದಲ್ಲಿ ನಂಬರ್ ಒನ್ ಪ್ರಜೆ ಎಂದು ಯಾರಿಗೆ ಹೇಳುತ್ತಾರೆ ಅವರೂ ಕಡಿಮೆ ಬರುತ್ತಿದ್ದಾರೆ. ಸಾಧಾರಣ ಪ್ರಜೆ ಹೆಚ್ಚು ಬರುತ್ತಿದ್ದಾರೆ. ಏಕೆಂದರೆ ಸಾಧಾರಣ ರೂಪದ ಜೊತೆ ಸ್ಥಿತಿಯೂ ಬಹಳ ಸಮಯ ಸಾಧಾರಣ ಆಗಿಬಿಡುತ್ತದೆ.

ಸಾಧಾರಣ ರೂಪದಲ್ಲಿ ಅಸಾಧಾರಣ ಸ್ಥಿತಿಯನ್ನು ಸ್ವಯಂ ನೀವೂ ಅನುಭವ ಮಾಡಿರಿ ಮತ್ತು ಅನ್ಯರಿಗೂ ಅನುಭವ ಮಾಡಿಸಿರಿ. ಬಹಿರ್ಮುಖತೆಯಲ್ಲಿ ಬರುವ ಸಮಯದಲ್ಲಿ ಅಂತರ್ಮುಖತೆಯ ಸ್ಥಿತಿಯನ್ನೂ ಸಹ ಜೊತೆ ಜೊತೆಗೆ ಇಟ್ಟುಕೊಳ್ಳುವುದು ಆಗುತ್ತಿಲ್ಲ. ಅಂತರ್ಮುಖಿಯಾದರೂ ಆಗುತ್ತೀರಿ, ಇಲ್ಲ ಬಹಿರ್ಮುಖಿಯಾದರೂ ಆಗುತ್ತೀರಿ ಆದರೆ ಅಂತರ್ಮುಖಿಯಾಗಿದ್ದು ಬಹಿರ್ಮುಖಿಯಾಗುವ ಅಭ್ಯಾಸಕ್ಕಾಗಿ ನಿಮ್ಮ ಮೇಲೆ ನೀವು ವಯ್ಯಕ್ತಿಕ ಗಮನ ಇಟ್ಟುಕೊಳ್ಳುವ ಅವಶ್ಯಕತೆ ಇದೆ. ಬಹಿರ್ಮುಖತೆಯ ಆಕರ್ಷಣೆ ಅಂತರ್ಮುಖತೆಯ ಸ್ಥಿತಿಗಿಂತ ಹೆಚ್ಚು ಇರುತ್ತದೆ. ಇದರ ಕಾರಣವೇನೆಂದರೆ ಸದಾ ನಿಮ್ಮ ಶ್ರೇಷ್ಠ ಸ್ವರೂಪ ಮತ್ತು ಶ್ರೇಷ್ಠ ನಶೆಯಲ್ಲಿ ಸ್ಥಿತರಾಗಿರುವುದಿಲ್ಲ. ಆದ್ದರಿಂದ ಸ್ಥಿತಿ ಶಕ್ತಿಶಾಲಿ ಆಗಿರುವುದಿಲ್ಲ.

ಜ್ಞಾನ ಪೂರ್ಣದ ಜೊತೆ ಶಕ್ತಿಪೂರ್ಣರೂ ಆಗಿ ಜ್ಞಾನ ಕೊಡಿ ಆಗ ಅನೇಕ ಆತ್ಮರನ್ನು ಅನುಭವಿ ಮಾಡಲು ಸಾಧ್ಯ. ಈಗ ಹೇಳುವವರು ಬಹಳ ಇದ್ದಾರೆ. ಆದರೆ ಅನುಭವ ಮಾಡಿಸುವವರು ಕಡಿಮೆ ಇದ್ದಾರೆ. ಹೇಳುವವರು ಅನೇಕರು ಇದ್ದೇ ಇರುವರು ಆದರೆ ಅನುಭವ ಮಾಡಿಸುವವರು ನೀವು ಮಾತ್ರ ಇರುವಿರಿ. ಆದ್ದರಿಂದ ಸೇವೆ ಮಾಡುವ ಸಮಯದಲ್ಲಿ ಜ್ಞಾನದಾನ ಮಾಡುವುದರ ಜೊತೆ ಜೊತೆಯಲ್ಲಿ ತಮ್ಮ ಮತ್ತು ತಂದೆಯ ಗುಣಗಳ ದಾನವನ್ನೂ ಸಹ ಮಾಡಬೇಕೆನ್ನುವ ಲಕ್ಷ್ಯ ಇಟ್ಟುಕೊಳ್ಳಿ. ಗುಣಗಳ ದಾನವನ್ನು ನಿಮ್ಮ ಹೊರತಾಗಿ ಯಾರೂ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸ್ವಯಂ ಸರ್ವ ಗುಣಗಳ ಸ್ವರೂಪ ಆಗಿರುವಾಗ ಅನ್ಯರನ್ನೂ ಅನುಭವಿ ಮಾಡಲು ಸಾಧ್ಯವಾಗುತ್ತದೆ. ಕಮಲ ಪುಷ್ಪದ ಸಮಾನ ಆಗಿರುವಿರಾ? ನಿಮ್ಮ ಜೀವನದ ಚಿತ್ರವನ್ನೇ ತೋರಿಸಿರುವರಲ್ಲವೆ ಅಥವಾ ಅನ್ಯ ಯಾರೋ ಮಹಾರಥಿಯರ ಜೀವನ ಚಿತ್ರವಾಗಿದೆಯೇ? ನಮ್ಮ ಚಿತ್ರವಾಗಿದೆ ಎಂದು ಹೇಳುತ್ತೀರಲ್ಲವೆ. ಚಿತ್ರ ಏಕೆ ಮಾಡಿರುತ್ತಾರೆ? ಚರಿತ್ರೆಯದೇ ಚಿತ್ರವಿರುತ್ತದೆ. ಆದ್ದರಿಂದ ಇಂತಹ ಚರಿತ್ರವಂತರಾಗಿರುವಿರಿ ಆದ್ದರಿಂದಲೇ ಚಿತ್ರವನ್ನು ಮಾಡಿರುವರು. ಈ ಒಂದು ಚಿತ್ರವನ್ನು ಸ್ಮೃತಿಯಲ್ಲಿಟ್ಟುಕೊಂಡು ಕರ್ಮ ಮಾಡಿ ಆಗ ಸದಾ ಮತ್ತು ಸರ್ವ ವಿಷಯಗಳಲ್ಲಿ ಅತೀತ ಆಗುವಿರಿ. ಈಗ ಅಲ್ಪ ಕಾಲ ಇರುತ್ತೀರಿ. ಎಷ್ಟೇ, ಎಂತಹದೇ ವಾತಾವರಣ ಇರಲಿ, ಎಂತಹದೇ ವಾಯುಮಂಡಲವಿರಲಿ ಆದರೆ ಈ ಚಿತ್ರ ಮಾತ್ರ ನೆನಪಿಟ್ಟುಕೊಂಡರೆ ವಾಯುಮಂಡಲದಿಂದ ಅತೀತರಾಗಿರುವಿರಿ. ಈಗ ವಾಯುಮಂಡಲದ ಪ್ರಭಾವ ಕೆಲವು ಬಾರಿ. ನಾವು ಪಂಚ ತತ್ವಗಳನ್ನೂ ಪಾವನ ಮಾಡುವವರು ಎನ್ನುವ ಲಕ್ಷ್ಯ ಬಹಳ ಉನ್ನತವಾಗಿದೆ. ಪರಿವರ್ತನೆ ಮಾಡುವವರಾಗಿದ್ದೇವೆ. ಅಂತಹವರು ವಾಯುಮಂಡಲಕ್ಕೆ ವಶರಾಗಲು ಸಾಧ್ಯವೇ? ಪರಿವರ್ತನೆ ಮಾಡುವವರಾಗಿರುವಿರಿ ಅಲ್ಲವೆ. ಪ್ರಕೃತಿಯ ಆಕರ್ಷಣೆಯಲ್ಲಿ ಬಂದು ಪರಿವರ್ತನೆ ಆಗುವವರಲ್ಲ. ಆಗ ಕಮಲ ಪುಷ್ಪದ ಸಮಾನ ಸದಾ ಇರಲು ಸಾಧ್ಯ.

ಇಂದು ಈ ಗುಂಪಿನ ಯಾವ ದಿನ ಇದೆ ? ಈಗ ಥೇರಿ ಪೂರ್ಣ ಆಯಿತು. ಇನ್ನು ಪ್ರ್ಯಾಕ್ಟಿಕಲ್ ಪೇಪರ್ ಕೊಡಲು ಹೋಗುತ್ತಿರುವಿರಿ. ಈಗ ಈ ಗುಂಪು ಅನ್ಯ ಎಲ್ಲಾ ಗುಂಪಿಗಿಂತ ವಿಶೇಷ ಯಾವ ಕಾರ್ಯ ಮಾಡಿ ತೋರಿಸುತ್ತೀರಿ? ಎಷ್ಟು ಸಮಯದಲ್ಲಿ ಎಷ್ಟು ವಾರಸುದಾರರನ್ನು ತಯಾರು ಮಾಡಿ ಕರೆದುಕೊಂಡು ಬರುವಿರಿ? ಸ್ವಲ್ಪ ಸಮಯದಲ್ಲಿ ಅನೇಕರನ್ನು ತಯಾರು ಮಾಡುವಿರಿ. ಇವರು ಪ್ರತಿಜ್ಞೆಯನ್ನು ಬಹಳ ಮಾಡಿದ್ದಾರೆ. ಪ್ರತಿಜ್ಞೆಗಳ ಕಾರ್ಯಕ್ರಮಗಳನ್ನೇ ಮಾಡುತ್ತಾರೆ ಎಷ್ಟು ಪ್ರತಿಜ್ಞೆಗಳನ್ನು ಮಾಡುತ್ತೀರಿ ಆ ಎಲ್ಲಾ ಪ್ರತಿಜ್ಞೆಗಳನ್ನು ನಿಭಾಯಿಸಲು ಒಂದು ಕಾಯದೆಯನ್ನು ನೆನಪಿಡಿ. ಯಾವುದು? (ಬದುಕಿದ್ದು ಸಾಯುವುದು) ಬಾರಿ ಬಾರಿಗೂ ಬದುಕಿದ್ದೂ ಸಾಯುವುದಿರುತ್ತದೆಯೇ? ಬಾಪ್ ದಾದಾ ಸದಾ ಪ್ರತಿಯೊಬ್ಬರಲ್ಲಿ ಎಲ್ಲಾ ಪ್ರಕಾರದ ಭರವಸೆಯನ್ನಿಡುತ್ತಾರೆ. ಆದರೆ ಭರವಸೆಗಳನ್ನು ಪೂರ್ಣ ಮಾಡುವವರು ನಂಬರವಾರ್ ತಮ್ಮ ಪ್ರತ್ಯಕ್ಷತೆ ಮಾಡುತ್ತಾರೆ. ಆದ್ದರಿಂದ ಈ ಗುಂಪು ಒಂದು ಮುಖ್ಯ ಪ್ರತಿಜ್ಞೆ ನೆನಪಿಡಬೇಕು. ಇಡೀ ಕೋರ್ಸ್‌ನ ಸಾರ ಏನಾಗಿತ್ತು? ಚಿತ್ರಗಳಲ್ಲಿಯೂ ಬಾಪ್ ದಾದಾ ಅವರನ್ನು ಪ್ರತ್ಯಕ್ಷ ಮಾಡಲು ಸಾಧ್ಯವಾಗುವಂತಹ ಮುಖ್ಯ ಯಾವ ಚಿತ್ರವನ್ನು ಪ್ರ್ಯಾಕ್ಟಿಕಲನಲ್ಲಿ ತೋರಿಸುವಿರಿ? ಎಲ್ಲಾ ಶಿಕ್ಷಣದ ಸಾರವನ್ನು ಹೇಳಿ, ಆಗ ಯಾವುದೇ ಕರ್ಮದಿಂದ ನೋಡುವ, ಏಳುವ, ನಡೆಯುವ ಮತ್ತು ಮಲಗುವುದರಿಂದ ಸಹ ಫರಿಶ್ತಾ ಕಂಡು ಬರುವುದು. ಎಲ್ಲಾ ಕರ್ಮದಲ್ಲಿ ಅಲೌಕಿಕತೆ ಇರಬೇಕು. ಯಾವುದೇ ಲೌಕಿಕತೆ ಕರ್ಮದಲ್ಲಿ ಮತ್ತು ಸಂಸ್ಕಾರಗಳಲ್ಲಿ ಇರಬಾರದು. ಇಂತಹ ಪರಿವರ್ತನೆ ಮಾಡಿರುವಿರಾ? ಸರ್ವೋತ್ತಮ ಪುರುಷಾರ್ಥಿಯ ಲಕ್ಷಣವೂ ವಿಶೇಷವಾಗಿರುತ್ತದೆ. ಅವರ ವಿಚಾರ, ಮಾತು & ಕರ್ಮ ಮೂರೂ

ಸಮಾನವಾಗಿರುತ್ತದೆ ಅವರೆಂದೂ ಇದನ್ನು ಮಾಡಬಾರದೆಂದು ವಿಚಾರ ಮಾಡಿದ್ದೆ ಆದರೆ ಮಾಡಿಬಿಟ್ಟೆ ಎಂದು ಹೇಳುವುದಿಲ್ಲ. ವಿಚಾರ, ಮಾತು ಮತ್ತು ಮಾಡುವುದು ಮೂರೂ ಸಮಾನ ಮತ್ತು ತಂದೆ ಸಮಾನ ಇರಬೇಕು. ಇಂತಹ ಶ್ರೇಷ್ಠ ಪುರುಷಾರ್ಥಿ ಆಗಿರುವಿರಾ? ಒಳ್ಳೆಯದು.

ಈ ಗುಂಪು ಎಷ್ಟು ದೊಡ್ಡದೋ ಅಷ್ಟೇ ಶಕ್ತಿಶಾಲಿ ಸ್ವರೂಪರಾಗಿ ನಾಲ್ಕೂ ಕಡೆ ಹರಡಿಬಿಟ್ಟರೆ ಶಕ್ತಿಯರು ಜೈ ಜೈಕಾರದ ಧ್ವನಿಯನ್ನು ಮೊಳಗಿಸಲು ಸಾಧ್ಯವಿದೆ. ಸಂಸ್ಕಾರಗಳ ಅಧೀನವಾಗಬಾರದು. ಯಾರದೇ ಸ್ನೇಹದ ಅಧೀನವೂ ಆಗಬಾರದು. ವಾಯುಮಂಡಲದ ಅಧೀನ ಸಹ ಅಲ್ಲ. ತಿಳಿಯಿತೆ, ಇಂತಹ ಶಬ್ದಗಳು ಮುಖದಿಂದಲೇ ಅಲ್ಲ ಸಂಕಲ್ಪ ರೂಪದಲ್ಲಿಯೂ ಬರಬಾರದು. ಏನು ಮಾಡಲಿ, ಅಸಹಾಯಕತೆ ಇದೆ. ವ್ಯಕ್ತಿ ಅಥವಾ ವಾಯುಮಂಡಲ ಅಸಹಾಯ ಮಾಡಿದರು, ಆದರೆ ಇಲ್ಲ. ಅಸಹಾಯ ಆಗಬಾರದು, ಗಟ್ಟಿ ಆಗಬೇಕು. ತಿಳಿಯಿತೆ. ಪುನಃ ಈ ತಕರಾರು ಬರಬಾರದು. ಭಟ್ಟಿಯ ಮೊದಲು ನಿಮ್ಮ ಪುರುಷಾರ್ಥದಲ್ಲಿ ಏನಾದರೂ ದೂರು ಇತ್ತೇ? ಅದು ಏನು? ನಿರ್ಬಲತೆಯ ಕಾರಣದಿಂದ ಸಂಗದೋಷದಲ್ಲಿ ಬರುವುದು. ಈ ದೂರನ್ನು ಸಮಾಪ್ತಿ ಮಾಡಿ ಹೋಗುತ್ತಿರುವಿರಾ? ಯಾರೂ ಇಂತಹ ಸಂಗದಲ್ಲಿ ಬರಲು ಸಾಧ್ಯವಿಲ್ಲ. ಯಾರಾದರೂ ಈಶ್ವರೀಯ ರೂಪದಿಂದ ಮಾಯೆ ತನ್ನ ಜೊತೆಗಾರ ಮಾಡಿಕೊಳ್ಳಲು ಪ್ರಯತ್ನ ಮಾಡಿದರೆ? ನೋಡಿ ನಿಮ್ಮ ಪ್ರತಿಜ್ಞೆಯನ್ನು ನೆನಪಿಡಿ, ಘೋಷಣೆಯನ್ನೇನು ಮಾಡಿದ್ದೀರಿ ಒಂಟಿಯಾಗಿದ್ದೇನೆ, ಒಬ್ಬನವರಾಗಿರುತ್ತೇನೆ, ಒಂದೇ ಮತದಂತೆ ನಡೆಯುತ್ತೇನೆ- ಇದನ್ನು ಸದಾ ಪಕ್ಕಾ ಇಟ್ಟುಕೊಳ್ಳಿ, ಈಶ್ವರೀಯ ರೂಪದಲ್ಲಿ ಮಾಯೆ ಯಾವ ರೀತಿ ಮುಂದೆ ಬರುತ್ತದೆಯೆಂದರೆ ಅದನ್ನು ಪರೀಕ್ಷಿಸುವುದು ಬಹಳ ಅವಶ್ಯ. ಪರೀಕ್ಷಿಸುವ ಶಕ್ತಿಯನ್ನು ಧಾರಣೆ ಮಾಡಿ ಹೋಗುತ್ತಿರುವಿರಾ? ಸದಾ ಇದನ್ನು ಅವಿನಾಶಿಯಾಗಿಟ್ಟುಕೊಳ್ಳಿ. ಈಗ ಪರಿಣಾಮ ನೋಡುತ್ತೇವೆ. ಅಲ್ಪಕಾಲದ ಪರಿಣಾಮ ನೋಡಬಾರದು. ಸದಾಕಾಲ ಮತ್ತು ಸಂಪೂರ್ಣ ಪರಿಣಾಮ ನೋಡಬೇಕು. ಯಾವ ಪ್ರತಿಜ್ಞೆಯನ್ನು ಮಾಡಿದ್ದೀರಿ ಈ ಗುಂಪು ಸಾಹಸವನ್ನೂ ಮಾಡಿದೆ ಆದರೆ ಆ ಪ್ರತಿಜ್ಞೆಯಿಂದ ಮಾಯೆ ದೂರ ಸರಿಯುವಂತೆ ಅಸಹಾಯ ಮಾಡಿದರೆ ಏನು ಮಾಡುವಿರಿ? ಪ್ರತಿಜ್ಞೆಯಂತೂ ಬಹಳ ಚೆನ್ನಾಗಿ ಮಾಡಿರುವಿರಿ. ಆದರೆ ಯಾರಾದರೂ ಅಸಹಾಯ ಮಾಡಿದರೆಂದು ತಿಳಿಯಿರಿ ಆಗ ಏನು ಮಾಡುವಿರಿ? ಸ್ವಯಂ ಅಸಹಾಯ ಆದವರು ಏನು ಯುದ್ಧ ಮಾಡಿಯಾರು?

ಸತ್ಯ ಎಂದು ಯಾವುದಕ್ಕೆ ಹೇಳುತ್ತಾರೆ ಗೊತ್ತಿದೆಯೇ? ಯಾವ ಮಾತು ಸಂಕಲ್ಪದಲ್ಲಿ ಬರುತ್ತದೆ, ಸಂಕಲ್ಪವನ್ನೂ ಮುಚ್ಚಿಡಬಾರದು ಇದಕ್ಕೆ ಸತ್ಯ ಎಂದು ಹೇಳುತ್ತಾರೆ! ಪುರುಷಾರ್ಥ ಮಾಡಿ ಸಫಲತೆಯನ್ನು ಪಡೆದರೂ ಸಹ ನಿಮ್ಮ ಸಫಲತೆ ಮತ್ತು ಸೋಲು ಎರಡರ ಸಮಾಚಾರವನ್ನೂ ಸ್ಪಷ್ಟವಾಗಿ ತಿಳಿಸಬೇಕು. ಇದಾಗಿದೆ ಸತ್ಯ, ಸತ್ಯತೆಯಿರುವವರು ತಮ್ಮ ಪ್ರತಿಜ್ಞೆಯನ್ನು ಪೂರ್ಣ ಮಾಡಲು ಸಾಧ್ಯ, ಒಳ್ಳೆಯದು.

ಅವ್ಯಕ್ತ ಮುರಳಿ 09-04-1971.

***ಅವ್ಯಕ್ತ ಸ್ಥಿತಿಯಲ್ಲಿ ಸರ್ವ ಗುಣಗಳ ಅನುಭವ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಮಾಸ್ಟರ್ ಬೀಜರೂಪನು.

2. ನಾನು ಮಾಸ್ಟರ್ ಜ್ಞಾನ ಸಾಗರನು.

3. ನಾನು ಮಾಸ್ಟರ್ ಸರ್ವಶಕ್ತಿವಾನ್ ಸ್ಥಿತಿಯಲ್ಲಿ ಸರ್ವಶಕ್ತಿಗಳನ್ನು ಧಾರಣೆ ಮಾಡಿ ಸಂಪೂರ್ಣ ಸ್ಥಿತಿಗೆ ತಲುಪಿರುವ ಸಂಪೂರ್ಣ ಸಂಪನ್ನ ಸ್ವರೂಪ.

4. ನಾನು ಮಾಸ್ಟರ್ ಸರ್ವಶಕ್ತಿವಾನ್ ಸ್ಥಿತಿಯಲ್ಲಿ ಇದ್ದು ಸೇವೆಯನ್ನು ಮಾಡುತ್ತಿದ್ದೇನೆ.

5. ನಾನು ನನ್ನ ಸಾಧಾರಣ ರೂಪದಿಂದ ಅಲೌಕಿಕ ಸ್ಥಿತಿಯಲ್ಲಿದ್ದು, ಎಲ್ಲರಿಗೂ ಮಾಸ್ಟರ್ ಭಗವಂತನ ರೂಪದಲ್ಲಿ ಕಾಣಿಸುತ್ತಿದ್ದೇನೆ.

6. ನಾನು ಸಾಧಾರಣ ಆತ್ಮರ ಮಧ್ಯದಲ್ಲಿ ವಿಶೇಷವಾಗಿ ಕಾಣಿಸುತ್ತಿದ್ದೇನೆ.

7. ನಾನು ಸಾಧಾರಣ ರೂಪದಲ್ಲಿ ಅಸಾಧಾರಣ ಸ್ಥಿತಿಯನ್ನು ಅನುಭವ ಮಾಡುತ್ತಾ ಇತರರಿಗೆ ಕೂಡ ಅನುಭವ ಮಾಡಿಸುತ್ತಿದ್ದೇನೆ.

8. ನಾನು ಬಹಿರ್ಮುಖತೆ ಮತ್ತು ಅಂತರ್ಮುಖತೆಯ ಸ್ಥಿತಿಯನ್ನು ಜೊತೆಜೊತೆಗೆ ಧಾರಣೆ ಮಾಡಿದ್ದೇನೆ.

9. ನಾನು ಸದಾ ಶ್ರೇಷ್ಠ ರೂಪ ಮತ್ತು ಶ್ರೇಷ್ಠ ನಶೆಯಲ್ಲಿ ಇರುತ್ತಾ ಶಕ್ತಿವಂತವಾಗಿ, ಅನೇಕ ಆತ್ಮರಿಗೆ ಜ್ಞಾನವನ್ನು ಕೊಟ್ಟು, ಅನುಭವ ಮಾಡಿಸುತ್ತಾ ಅನುಭವಿ ಮೂರ್ತಿಯರನ್ನಾಗಿ ತಯಾರು ಮಾಡಿದ್ದೇನೆ.

10. ನಾನು ಸೇವೆ ಮಾಡುವ ಸಮಯದಲ್ಲಿ ಜ್ಞಾನದಾನದೊಂದಿಗೆ ನನ್ನ ಮತ್ತು ತಂದೆಯ ಗುಣಗಳನ್ನು ದಾನ ಮಾಡಿದ್ದೇನೆ.

11. ನಾನು ಕಮಲ ಪುಷ್ಪ ಸಮಾನವಾಗಿ ನನ್ನ ಚಿತ್ರದ ಸ್ಮೃತಿಯಲ್ಲಿದ್ದು ಪ್ರತಿಯೊಂದು ಕರ್ಮವನ್ನು ಮಾಡುತ್ತಾ ಸದಾ ಸರ್ವ ವಿಷಯಗಳಲ್ಲಿ ಅಲಿಪ್ತ ವಾಗಿದ್ದೇನೆ.

12. ನಾನು ವಾಯುಮಂಡಲಕ್ಕೆ ವಶವಾಗದ, ಪ್ರಕೃತಿಯ ಆಕರ್ಷಣೆಯಲ್ಲಿ ಬರದ, ಪಂಚತತ್ವಗಳನ್ನು ಪಾವನ, ಪರಿವರ್ತನೆ ಮಾಡುವ ಕಮಲ ಪುಷ್ಪ ಸಮಾನ ಸ್ವರೂಪ.

13. ನಾನು ಪ್ರತಿಯೊಂದು ಕರ್ಮದಲ್ಲಿ ಅಲೌಕಿಕತೆ ಧಾರಣೆ ಮಾಡಿರುವ ಫರಿಶ್ತಾ ಸ್ಥಿತಿಯಲ್ಲಿ ಇದ್ದೇನೆ.

14. ನಾನು ಯೋಚಿಸುವುದು, ಹೇಳುವುದು ಮತ್ತು ಮಾಡುವುದು - ಮೂರನ್ನೂ ಸಮಾನವಾಗಿಟ್ಟಿರುವ ಸರ್ವೋನ್ನತ ಪುರುಷಾರ್ಥಿ.

15. ನಾನು ಸಂಸ್ಕಾರಗಳಿಗೆ,  ವಾಯುಮಂಡಲಕ್ಕೆ ಅಧೀನವಾಗದ ಅಧಿಕಾರಿ.

16. ನಾನು ತಂದೆಯವನಾಗಿಯೇ ಇದ್ದೇನೆ, ತಂದೆಯ ಶ್ರೀಮತದನುಸಾರವೇ ನಡೆಯುತ್ತಿದ್ದೇನೆ.

17. ನಾನು ಸದಾ ಅವಿನಾಶಿಯಾಗಿ ಪರಿಶೀಲನಾ (ಪರೀಕ್ಷಿಸುವ) ಶಕ್ತಿಯನ್ನು ಧಾರಣೆ ಮಾಡಿದ್ದೇನೆ.